**ಪಿಡಬ್ಲ್ಯೂ-1**

**ದಿನಾಂಕಃ- 12/01/2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ, ಪ್ರಮಾಣೀಕರಿಸಲಾಯಿತು.**

**-:ಪಾಟೀ ಸವಾಲು: ಶ್ರೀ. ಎಸ್.ಎನ್.ಎಸ್.,ವಕೀಲರಿಂದ ಎದುರುದಾರರ ಪರವಾಗಿ :-**

ನನ್ನ ನೇಮಕಾತಿ ನಂತರದಲ್ಲಿ ಅನುದಾನ ಸಹಿತ ನೇಮಕಾತಿ ಎಂದು ಆದೇಶ ಆಯಿತು ಎಂದರೆ ಸರಿ. ಸಾಕ್ಷಿಯು ಸ್ವತಃ ನುಡಿಯುತ್ತಾರೆ ಮೊದಲ 5 ವರ್ಷ ಅದು ಅನುದಾನ ರಹಿತ ನೇಮಕಾತಿ ಆಗಿತ್ತು ಎಂದು. ಅನುದಾನ ಸಹಿತ ನೇಮಕಾತಿ ಎಂದು ಆದೇಶವಾದ ನಂತರ ನಮ್ಮ ಸೇವೆ ಕರ್ನಾಟಕ ಸೇವಾ ನಿಯಮಗಳ ಮತ್ತು ಕರ್ನಾಟಕ ಶಿಕ್ಷಣ ಕಾಯ್ದೆಯ ನಿಯಮಗಳಿಗೆ ಒಳಪಡುತ್ತದೆ ಎಂದರೆ ಸರಿ. 2016 ರಲ್ಲಿ ನನ್ನನ್ನು ಸೇವೆಯಿಂದ ಅಮಾನತ್ತುಗೊಳಿಸಿದ್ದರು ಎಂದರೆ ಸರಿಯಲ್ಲ. ಕರ್ನಾಟಕ ಸೇವಾ ನಿಮಯಗಳ ಪ್ರಕಾರ ನಾನು ಸರಕಾರಿ ಸೇವಕನಾಗಿ ಪತ್ರಿಕಾ ಪ್ರಕಟನೆ ಮತ್ತು ಪತ್ರಿಕಾ ಗೋಷ್ಠಿಯನ್ನು ನಡೆಸುವ ಹಾಗೆ ಇಲ್ಲ ಎಂದರೆ ಸರಿಯಲ್ಲ. ನಾನು ಎದುರುದಾರರ ಸಂಸ್ಥೆಯ ವಿರುದ್ಧ ಪತ್ರಿಕಾಗೋಷ್ಠಿಯನ್ನು ನಡೆಸಿರುತ್ತೇನೆ ಮತ್ತು ಪತ್ರಿಕೆ ಪ್ರಕಟನೆಯನ್ನು ನೀಡಿರುತ್ತೇನೆ.

ನಾನು ನನ್ನ ಸೇವಾ ಅವಧಿಯಲ್ಲಿ ಶಾಲೆಯಲ್ಲಿ ಸರಿಯಾಗಿ ಬೋಧನೆ ಮಾಡದೇ ಇರುವುದು, ತರಗತಿಯಲ್ಲಿ ಮೊಬೈಲ ಫೋನ ಬಳಸುತ್ತಿದ್ದದ್ದು, ಮತ್ತು ಸಂಘದ ಪದಾಧಿಕಾರಿಗಳಿಗೆ ಅವಾಚ್ಯ ಶಬ್ದಗಳಿಂದ ಬೈಯ್ಯುವುದು, ಹಾಗೂ ಶಾಲಾ ಆವರಣಕ್ಕೆ ಹೊರಗಡೆ ವ್ಯಕ್ತಿಗಳನ್ನು ಕರೆದುಕೊಂಡು ಬರುವುದು, ಮುಂತಾದ ಗುರುತರ ಆರೋಪಗಳು ನನ್ನ ಮೇಲೆ ಇದ್ದವು ಎಂದರೆ ಸರಿಯಲ್ಲ. ನಾನು ಈ ರೀತಿ ತಪ್ಪು ಮಾಡಿರುವ ಬಗ್ಗೆ ನನಗೆ ಎದುರುದಾರ ಸಂಸ್ಥೆ ದಿ: 19.11.2019 ರಂದು ನೋಟಿಸ್ ನೀಡಿತ್ತು ಎಂದರೆ ಸರಿಯಲ್ಲ. ದಿ: 18.11.2019 ರಿಂದ ನನ್ನನ್ನು ಸೇವೆಯಿಂದ ವಜಾಮಾಡಿರುತ್ತಾರೆ ಎಂದರೆ ಸರಿ. ದಿ: 20.08.2020 ರಂದು ನನಗೆ ಮತ್ತೊಂದು ನೋಟಿಸನ್ನು ಎದುರುದಾರ ಸಂಸ್ಥೆ ನೀಡಿತ್ತು ಎಂದರೆ ಸರಿ. ಸದರಿ ನೊಟಿಸ್ ಗೆ ನಾನು ದಿ: 28.08.2020 ರಂದು ಪ್ರತ್ಯುತ್ತರ ನೀಡಿರುತ್ತೇನೆ ಎಂದರೆ ಸರಿ. ತದನಂತರ ಎದುರುದಾರ ಸಂಸ್ಥೇಯು ನನ್ನ ವಿರುದ್ಧ ಇಲಾಖಾ ವಿಚಾರಣೆಯನ್ನು ನಿಗಧಿ ಪಡೆಸಿತ್ತು ಎಂದರೆ ಸರಿ. ಇಲಾಖಾ ವಿಚಾರಣೆಯ ನೋಟಿಸ್ ನನಗೆ ವಿಚಾರಣಾ ಅಧಿಕಾರಿಯವರು ನೀಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಇಬ್ಬರು ಅಧಿಕಾರಿಗಳು

ನನಗೆ ನೋಟಿಸ್ ಕಳಿಸಿರುತ್ತಾರೆ ಎಂದು ನುಡಿಯುತ್ತಾರೆ. ಆ ಕಾರಣ ನನಗೆ ಗೊಂದಲ ಉಂಟಾಯಿತು ಎಂದು ನುಡಿಯುತ್ತಾರೆ.

ದಿ: 17.10.2020 ರಂದು ನಾನು ಇಲಾಖಾ ವಿಚಾರಣಾಧಿಕಾರಿ ಮುಂದೆ ನನ್ನ ವಕೀಲರ ಮೂಲಕ ಹಾಜರಾಗಿರುತ್ತೇನೆ ಎಂದರೆ ಸರಿ. ದಿ: 24.10.2020 ರಂದು ನಾನು ಬೇರೆ ವಕೀಲರನ್ನು ನೇಮಿಸಿಕೊಂಡು ವಿಚಾರಣಾಧಿಕಾರಿಗಳ ಮುಂದೆ ಹಾಜರಾಗಿರುತ್ತೇನೆ ಎಂದರೆ ಸರಿ. ನಾನು ಮತ್ತು ನಮ್ಮ ವಕೀಲರು ವಿಚಾರಣಾಧಿಕಾರಿಗಳ ಮುಂದೆ ಯಾವುದೇ ತಕರಾರನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿ. ನನಗೆ ಸಾಕಷ್ಟು

ಅವಕಾಶಗಳನ್ನು ನೀಡಿದ ನಂತರ ಇಲಾಖಾ ವಿಚಾರಣಾಧಿಕಾರಿಗಳು ವಿಚಾರಣೆಯನ್ನು ಪೂರ್ಣಗೊಳಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ದುರುದ್ದೇಶಪೂರ್ವಕವಾಗಿ ನನ್ನ ತಪ್ಪು ಕಂಡು ಬರುತ್ತದೆ ಎಂದು ನಾನು ಇಲಾಖಾ ವಿಚಾರಣಾಧಿಕಾರಿಗಳ ಮುಂದೆ ಹಾಜರಾಗಿರುವುದಿಲ್ಲ ಎಂದರೆ ಸರಿಯಲ್ಲ. ಇಲಾಖಾ ವಿಚಾರಣೆಯನ್ನು ನೈಸರ್ಗಿಕ ನ್ಯಾಯದ ತತ್ವದ ಅಡಿಯಲ್ಲಿ ನಡೆಸಿ ಪೂರ್ಣಗೊಳಿಸಿರುತ್ತಾರೆ ಎಂದರೆ ಸರಿಯಲ್ಲ.

ಇಲಾಖಾ ವಿಚಾರಣೆ ಪೂರ್ಣಗೊಂಡ ನಂತರ ನನಗೆ ಮತ್ತೇ ನೋಟಿಸ್ ಜಾರಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಸದರಿ ನೋಟಿಸ್ ಗೆ ಸಂತೃಪ್ತಿಕರ ಉತ್ತರವನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರ ಸಂಸ್ಥೆಯವರು ನನ್ನ ವಿರುದ್ಧ ಯಾವುದೇ ವೈಯಕ್ತಿಕ ಹಗೆತನ ಇಲ್ಲದೇ ಇಲಾಖಾ ವಿಚಾರಣೆಯನ್ನು ನಡೆಸಿ, ನನ್ನನ್ನು ಸೇವೆಯಿಂದ ವಜಾಗೊಳಿಸಿರುತ್ತಾರೆ ಎಂದರೆ ಸರಿಯಲ್ಲ. ನೇಮಕಾತಿ ದಿನದಿಂದಲೂ ನನ್ನ ನಡುವಳಿಕೆಗಳು ಸಂಘದ ಮೂಲ ಉದ್ದೇಶಕ್ಕೆ ಧಕ್ಕೆ ತರುವಂತಹದ್ದು ಮತ್ತು ವ್ಯತಿರಿಕ್ತವಾಗಿತ್ತು ಎಂದರೆ ಸರಿಯಲ್ಲ. ನಾನು ನನ್ನ ಅರ್ಜಿಯಲ್ಲಿ ಬರೆದಿರುವ ಮತ್ತು ಮುಖ್ಯ ವಿಚಾರಣೆಯಲ್ಲಿ ನಾನು ಹೇಳಿರುವ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

ಮರುವಿಚಾರಣೆ: ಇಲ್ಲ.

*(ನನ್ನ ಉಕ್ತ ಲೇಖನದ ಮೇರೆಗೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).*

ಓ.ಹೇ.ಕೇ. ಸರಿ ಅದೆ,

Sd/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ವಿಜಯಪುರ.